ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ಸಚಿವರು).—

ಅ) ಹೌದು

ಆ) ದಿನಾಂಕ 24-2-1971ರಲ್ಲಿ ನಿವೇಶನವನ್ನು ಸಾರಿಗೆ ನಿಗಮದ ವಶಕ್ಕೆ ಪಡೆದುಕೊಳ್ಳಲಾಗಿದೆ

ಇ) ಕೊಡಗು ಜಿಲ್ಲೆಯಲ್ಲಿ ಇನ್ನೂ ಪೂರ್ಣ ರಾಷ್ಟ್ರೀಕರಣವಾಗಿಲ್ಲದೆ ಇರುವುದರಿಂದ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆರ್ಥಿಕ ಮುಗ್ಗಟ್ಟಿನಿಂದಾಗಿ ಇದುವರೆವಿಗೂ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಪ್ರಸಕ್ತ ಸಾಲಿನಲ್ಲಿ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀಮತಿ ಸುಮಾ ವಸಂತ.—ವಿರಾಜಪೇಟೆಯಲ್ಲಿ ಬಸ್ ನಿಲ್ದಾಣವನ್ನು ಕಟ್ಟಲಿಕ್ಕೆ ಅಂದಾಜು ವೆಚ್ಚ ಎಷ್ಟು ಎಂಬುದರ ಬಗ್ಗೆ ತಮ್ಮಲ್ಲಿ ಮಾಹಿತಿ ಇದೆಯೆ ? ಇದ್ದರೆ ಅದರ ಅಂದಾಜು ಜೆಚ್ಚ ಎಷ್ಟು ? ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಅದು ಮಂಜೂರಾತಿ ಆಗಿದೆಯೆ ?

ಶ್ರೀ ಪಿ ಜಿ ಆರ್. ಸಿಂಧ್ಯ.—ಇನ್ನು ಮಂಜೂರಾತಿ ಆಗಿಲ್ಲ, ಮುಂದಿನ ವರ್ಷ ಕೆಲಸ ಪ್ರಾರಂಭ ಮಾಡುತ್ತೇವೆ,

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಯಡಿಯೂರಪ್ಪನವರೆ, ತಮ್ಮ ಪ್ರಶ್ನೆ ಸೋಮವಾರ ಬರುತ್ತದೆ. ಮಾನ್ಯ ಸದಸ್ಯರಾದ ಆರ್, ನಾರಾಯಣಪ್ಪ, ಸದಸ್ಯರು ಬಂದಿಲ್ಲ.

ವಿಷಯ : ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಹಾಗೂ ದೇವನಹಳ್ಳಿ ಪಟ್ಟಣಗಳ ಕುಡಿಯುವ ನೀರಿನ ವ್ಯವಸ್ಥೆ ವಿಚಾರ.

ಪ್ರ. ಸಂಖ್ಯೆ 73 (421) ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಹಾಗೂ ದೇವನಹಳ್ಳಿ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಶಾಶ್ವತ ಪರಿಹಾರಕ್ಕಾಗಿ ಸರ್ಕಾರವು ಕ್ರಮ ಕೈಗೊಂಡಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ

ಆ) ಈ ಎರಡೂ ಪಟ್ಟಣಗಳಲ್ಲೂ ನೀರಿನ ಅಭಾವ ನೀಗಿಸಲು ಈಗಾಗಲೇ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲಾಗಿದ್ದು ಕಾರ್ಯಗತಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ವಿಜಯಪುರ ಮತ್ತು ದೇವನಹಳ್ಳಿ ಎಂಬ ಎರಡು ಟೌನ್‌ಗಳಿವೆ. ದೇವನಹಳ್ಳಿಯಲ್ಲಿ 22 ಸಾವಿರ ಜನಸಂಖ್ಯೆಯಿದೆ. ಅಲ್ಲಿ ನಾಲ್ಕು ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ಮುನಿಸಿಪಾಲಿಟಿಯವರು ವಾರಕ್ಕೆ ಮೂರು ಸಾರಿ ಅರ್ಧಗಂಟೆ ಮಾತ್ರ ನೀರು ಕೊಡುತ್ತಿದ್ದಾರೆ. ಅದು ಜನರಿಗೆ ಸಾಕಾಗುತ್ತಿಲ್ಲ. ಅದೇರೀತಿ ವಿಜಯಪುರ ಟೌನಿನಲ್ಲಿಯೂ ಸಹ ವಾರದಲ್ಲಿ ಒಂದೆರಡು ಸಾರಿ ಅರ್ಧ ಗಂಟೆ ನೀರು ಕೊಡಲಾಗುತ್ತಿದೆ, ಅಲ್ಲೂ ಸಹ ಜನರಿಗೆ ನೀರು ಸಿಗುತ್ತಿಲ್ಲ. ಒಂದು ಮೈಲಿ ದೂರ ಹೋದರೂ ಎಲ್ಲೂ ನೀರು ಸಿಗುತ್ತಿಲ್ಲ. ಇದರ ಬಗ್ಗೆ ಸಾಕಷ್ಟು ಪತ್ರಿಕೆಗಳಲ್ಲಿ ವರದಿಯಾಗಿದೆ. ಈಗಿರತಕ್ಕ ಪಂಪುಗಳ ಜೊತೆಗೆ 10-15 ಪಂಪುಗಳನ್ನು ಜಾಸ್ತಿ ಮಾಡಬೇಕು, ಅಲ್ಲಿಯ ಜನರು ಶಾಸಕರನ್ನು ಘೆರಾವ್ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಮತ ಕ್ಷೇತ್ರ ಮಿಾಸಲು ಮತಕ್ಷೇತ್ರವಾದ್ದರಿಂದ ಏನಾದರೂ ಉದಾಸೀನ ಮಾಡಲಾಗುತ್ತಿದೆಯೆ, ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್,—ಮಿಾಸಲು ಕ್ಷೇತ್ರವೆಂದು ಉದಾಸೀನವನ್ನೇನೂ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ನೀರಿನ ತೊಂದರೆ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಯೂ ಇದೆ. ದೇವನಹಳ್ಳಿ ಮತ್ತು ವಿಜಯಪುರಗಳಲ್ಲೂ ಸಹ ಕುಡಿಯುವ ನೀರಿನ ತೊಂದರೆಯಿದೆ. ಮಾನ್ಯ ಸದಸ್ಯರು ದೇವನಹಳ್ಳಿ ಪಟ್ಟಣಕ್ಕೆ ಆರು ಕೊಳವೆ ಬಾವಿಗಳನ್ನು ಕೋರಿದ್ದರು, ನಾವು 8 ಕೊಳವೆ ಬಾವಿಗಳನ್ನು ಕೊಟ್ಟಿದ್ದೇವೆ, ಈಗಾಗಲೇ ನಾಲ್ಕು ಕೊಳವೆ ಬಾವಿಗಳು ಕೆಲಸ ಮಾಡುತ್ತಿವೆ. ಇನ್ನು ನಾಲ್ಕು ಕೊಳವೆ ಬಾವಿಗಳನ್ನು ಹಾಕಿಸುತ್ತೇವೆ, ಅದೇರೀತಿ ವಿಜಯಪುರದಲ್ಲಿ 1983-84ರಲ್ಲಿ ಎರಡು ಕೊಳವೆ ಬಾವಿಗಳನ್ನು, 1984-85ರಲ್ಲಿ ನಾಲ್ಕು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. 1985-86ರಲ್ಲಿ ನಾಲ್ಕು ಕೊಳವೆ ಬಾವಿಗಳನ್ನು ಕೊರೆಸಲು ಉದ್ದೇಶಿಸಲಾಗಿದೆ. ವಿಜಯಪುರ ಪಟ್ಟಣಕ್ಕೆ ಕುಡಿಯುವ ನೀರಿನ

ಸರಬರಾಜಿಗಾಗಿ 4.20 ಲಕ್ಷ ರೂಪಾಯಿಗಳ ಪೂರ್ವಬಾವಿ ಅಂದಾಜನ್ನು ತಯಾರಿಸಲಾಗಿದ್ದು ತಾತ್ಕಾಲಿಕ ಆಡಳಿತಾತ್ಮಕ ಅನುಮೋದನೆ ನೀಡಿ, ಕೆಲಸ ಮಾಡಲಿಕ್ಕೆ ಅನುಮತಿ ನೀಡಬೇಕಾಗಿದೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಕೊಳವೆ ಬಾವಿಯ ನಾಲ್ಕು ಪಾಯಿಂಟ್‌ಗಳನ್ನು ತೋರಿಸಲಾಗಿದೆ. ಇನ್ನೂ ಕೆಲಸ ಪ್ರಾರಂಭವಾಗಿಲ್ಲ 10 ಕೊಳವೆ ಬಾವಿಗಳನ್ನು ಮಂಜೂರು ಮಾಡಬೇಕು. ನಮ್ಮಲ್ಲಿ ಕುಡಿಯುವ ನೀರಿನ ಅಭಾವ ತುಂಬಾ ಇದೆ, ನಮ್ಮಲ್ಲಿ 500 ಅಡಿ ಆಳ ಬಾವಿ ತೆಗೆದರೂ ನೀರು ಸಿಗುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಆರು ಕೊಳವೆ ಬಾವಿಗಳನ್ನು ಕೇಳಿದ್ದೀರಿ, ನಾವು ಎಂಟು ಕೊಳವೆ ಬಾವಿಗಳನ್ನು ಕೊಟ್ಟಿದ್ದೇವೆ. ಎಂಟರಲ್ಲಿ ನೀರು ಸಿಕ್ಕಿದರೆ ಇನ್ನು ಮುಂದೆ ಜಾಸ್ತಿ ಕೊಳವೆಬಾವಿ ಹಾಕಬೇಕಾಗಿಲ್ಲ. ಅದನ್ನು ನೋಡಿಕೊಂಡು ಅಗತ್ಯಬಿದ್ದರೆ, ನೀರು ಒದಗಿಸತಕ್ಕ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ವಿಷಯ : ಶ್ರೀ ಎಸ್. ಅಬ್ದುಲ್ ರಜಾಕ್ ಸಾಹೇಬರ ಪುತ್ರ ಶ್ರೀ ಎಸ್. ಅಬ್ದುಲ್ ರಷೀದ್‌ರವರಿಗೆ ಮಂಜೂರಾದ ಗಣಿ ಗುತ್ತಿಗೆ ಸಂಖ್ಯೆ 129/60ರ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ 7161/69ರಲ್ಲಿ ಕೊಟ್ಟ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ

ಪ್ರ. ಸಂಖ್ಯೆ 63 (158) ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಭಾರಿ ಹಾಗೂ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಶ್ರೀ ಅಬ್ದುಲ್ ರಜಾಕ್ ಸಾಹೇಬರ ಗ. ಗು. ಸಂಖ್ಯೆ 129/60ರ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯವು 1973ರ ರಿಟ್ ಅರ್ಜಿ ಸಂಖ್ಯೆ 7161/69ರಲ್ಲಿ ನೀಡಿದ ತೀರ್ಪನ್ನು ಅನುಷ್ಠಾನಗೊಳಿಸದಿರಲು ಕಾರಣವೇನು;

ಆ) ದಿನಾಂಕ 9-3-81ರಂದು 31 (344)ನೇ ಪ್ರಶ್ನೆಗೆ ಉತ್ತರಿಸುವಾಗ ಅದನ್ನು ಅನುಷ್ಠಾನ ಮಾಡುತ್ತೇವೆಂದು ವಚನ ಕೊಟ್ಟದ್ದು ನಿಜವಲ್ಲವೇ;

ಇ) ಹಾಗೆಯೇ ದಿನಾಂಕ 2-8-81 ಹಾಗೂ 2-4-82ರ ಸಿಐ ಎಂಎಂಎಂ/79 ಸಂಖ್ಯೆಯ ಸರ್ಕಾರಿ ಆದೇಶದಂತೆ ಅಭ್ಯರ್ಥಿಯನ್ನು ಗಣಿ ಗುತ್ತಿಗೆ ಮಂಜೂರು ಮಾಡಿಕೊಳ್ಳಲು ಬಿಡಲಿಲ್ಲ ಎಂಬುದು ನಿಜವೇ ?

ಈ) ಈ ಬಗ್ಗೆ ಹಲವಾರು ಮನವಿಗಳನ್ನು ಅರ್ಪಿಸಿದ್ದರೂ ಯಾವ ಕ್ರಮವನ್ನು ತೆಗೆದುಕೊಳ್ಳದಿರಲು ಕಾರಣ ;

ಉ) ಸರ್ಕಾರಿ ಆದೇಶವನ್ನು ಎಕ್ಸಿಕ್ಯೂಟ್ ಮಾಡದ ಕಾರಣ ಉಂಟಾದ ಕಂದಾಯ ನಷ್ಟಕ್ಕೆ ಜವಾಬುದಾರರಾದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲಾಗುತ್ತದೆಯೆ ?

ಶ್ರೀ ಡಿ ಮಂಜುನಾಥ್ (ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಸಂಡೂರು ತಾಲ್ಲೂಕಿನ ಆರ್. ಎಂ. ಬ್ಲಾಕಿನ 400 ಎಕರೆ ಪ್ರದೇಶದಲ್ಲಿ ಶ್ರೀ ಅಬ್ದುಲ್ ರಜಾಕ್ ಸಾಹೇಬರಿಗೆ ಗಣಿ ಗುತ್ತಿಗೆ ಮಂಜೂರು ಮಾಡಲಾಗಿದೆ.

ಆ) ಹೌದು.

ಇ) ಇಲ್ಲ.

ಈ) ಮಂಜೂರು ಮಾಡಿದ ಪ್ರದೇಶವನ್ನು ಅಭ್ಯರ್ಥಿಯು ಒಪ್ಪಿಕೊಳ್ಳದ ಕಾರಣ ಗುತ್ತಿಗೆ ಕರಾರು ಪತ್ರವನ್ನು ಎಕ್ಸಿಕ್ಯೂಟ್ ಮಾಡುವುದು ವಿಳಂಬವಾಯಿತು. ಹಾಗೂ ಸದರಿ ವಿಷಯದಲ್ಲಿ ಸರ್ಕಾರ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಧ್ಯೆ ಪತ್ರ ವ್ಯವಹಾರ ನಡೆಯುತ್ತಿತ್ತು. ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಈಗಾಗಲೇ ಹೊರಡಿಸಿರುವ ಸರ್ಕಾರಿ ಆದೇಶವನ್ನು ಕಾರ್ಯಗತಗೊಳಿಸುವಂತೆ ಹಾಗೂ ಅಭ್ಯರ್ಥಿಗೆ ಗುತ್ತಿಗೆಗೆ ಕರಾರನ್ನು ಎಕ್ಸಿಕ್ಯೂಟ್ ಮಾಡಿಕೊಡಲು ಈ ಕೂಡಲೇ ಕ್ರಮವನ್ನು ಕೈಗೊಳ್ಳುವಂತೆ ನಿರ್ದೇಶನವೀಯಲಾಗಿದೆ.

ಉ) ಮೇಲಿನ (ಈ) ಪ್ರಶ್ನೆಗೆ ಕಾಣಿಸಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಮೂರನೆಯ ಪ್ರಶ್ನೆಗೆ ಪ್ಲಾನ್ ಕೊಟ್ಟಿಲ್ಲವೆಂದು ಹೇಳಿದರು, ಮೊದಲಿಗೆ ಪ್ಲಾನ್ ಕೊಟ್ಟಿದ್ದಾರೆ. ಪ್ಲಾನ್ ಪ್ರಕಾರ ಕೊಡಬೇಕೆಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ಈಗ ಮಂತ್ರಿಗಳು ಇಲ್ಲವೆಂದು ಹೇಳುತ್ತಿದ್ದಾರೆ.